ಅಧ್ಯಕ್ಷರು : ಶ್ರೀ ಕೆ. ಸಿ. ಮೊಡಗೇಕರ್ ನಿಮ್ಮ ಪ್ರಶ್ನೆಯು ಪಶು ಸಂಗೋಪನಾ ಇಲಾಖೆಗೆ ವರ್ಗಾವಣೆ ಮಾಡಲಾಗಿದೆ.

ವಿಷಯ : ರಾಜ್ಯದಲ್ಲಿ ಟ್ರೈಸಂ ಯೋಜನೆ

1234

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ ಕ್ಷೇತ್ರ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಟ್ರೈಸಂ ಯೋಜನೆ ಅನ್ವಯ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿರುವ ಜಿಲ್ಲೆಗಳೆಷ್ಟು?

ಆ) ಬೆಳಗಾವಿ ಜಿಲ್ಲೆಯಲ್ಲಿ ಈ ಯೋಜನೆ ಅನ್ವಯ ಮಹಿಳಾ ಸೊಸೈಟಿಗಳಲ್ಲಿ ಹೊಲಿಗೆ ತರಬೇತಿ ಹಾಗೂ ಟೈಪ್‌ರೈಟಿಂಗ್ ಮಹಿಳಾ ಅಭ್ಯರ್ಥಿಗಳಿಗೆ ಅವಕಾಶ ನೀಡಲಾಗಿರುವ ಸಂಖ್ಯೆ ಎಷ್ಟು?

ಇ) ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ ಪ್ರತಿಯೊಂದು ಜಿಲ್ಲೆಗೆ ಈ ಯೋಜನೆ ಅನ್ವಯ ಕಳೆದ ಮೂರು ವರ್ಷಗಳಲ್ಲಿ ಬಿಡುಗಡೆ ಮಾಡಿದ ಹಣವೆಷ್ಟು? (ವಿವರ ನೀಡುವುದು)

ಈ) ಬೆಳಗಾವಿ ಜಿಲ್ಲೆ ಬೈಲಹೊಂಗಲದಲ್ಲಿ ನೂತನ ಅಕ್ಕಮಹಾದೇವಿ ಮಹಿಳಾ ವಿವಿಧೋದ್ದೇಶಗಳ ಸಹಕಾರಿ ಸಂಘದಿಂದ ಈ ಯೋಜನೆ ಕೈಬಿಡಲು ಕಾರಣವೇನು?

ಶ್ರೀ ಎಂ. ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ಸಚಿವರು) :

ಅ) ಟ್ರೈಸಂ ಯೋಜನೆಯನ್ನು ರಾಜ್ಯದ ಎಲ್ಲಾ 20 ಜಿಲ್ಲೆಗಳಲ್ಲೂ ಕಾರ್ಯಗತ ಗೊಳಿಸಲಾಗುತ್ತಿದೆ.

ಆ) ಈ ಯೋಜನೆಯಡಿ ಇದುವರೆಗೆ ಹೊಲಿಗೆಯಲ್ಲಿ 453 ಮಹಿಳಾ ಅಭ್ಯರ್ಥಿಗಳನ್ನು ಮತ್ತು 78 ಅಭ್ಯರ್ಥಿಗಳನ್ನು ಬೆರಳಚ್ಚಿನಲ್ಲಿ ತರಬೇತಿಗೊಳಿಸಲಾಗಿದೆ.

ಇ) ಕಳೆದ ಮೂರು ವರ್ಷಗಳಲ್ಲಿ ಬಿಡುಗಡೆ ಮಾಡಿರುವ ಹಣದ ವಿವರವನ್ನು ಲಗತ್ತಿಸಲಾಗಿದೆ.

ಈ) ಇನ್ನು ಮುಂದೆ ಹೊಲಿಗೆ ತರಬೇತಿ ಕಾರ್ಯವನ್ನು ಮುಂದುವರಿಸಬಾರದೆಂದು ಬೆಳಗಾಂ ಜಿಲ್ಲಾಪರಿಷತ್ ನಿರ್ಣಯಿಸಿದೆ. ಸರ್ಕಾರವು ಈ ಬಗ್ಗೆ ಪರಿಶೀಲಿಸಿ ಬೆಳಗಾಂ ಜಿಲ್ಲಾಪರಿಷತ್ತಿಗೆ ಸೂಕ್ತ ನಿರ್ದೇಶನವನ್ನು ನೀಡುತ್ತದೆ.

ಕಳೆದ ಮೂರು ವರ್ಷಗಳಲ್ಲಿ ಟ್ರೈಸರಿ ಯೋಜನೆಯಡಿ ರಾಜ್ಯದಲ್ಲಿ
ಬಿಡುಗಡೆ ಮಾಡಿರುವ ಜಿಲ್ಲಾವಾರು ಹಾಗೂ ವಾರ್ಷಿಕವಾರು ವಿವರಣೆ

| ಕ್ರ.ಸಂ. | ಜಿಲ್ಲೆ | 90-91 | 91-92 | 92-93 28-2-93 ರವರೆಗೆ | ಒಟ್ಟು |
|---|---|---|---|---|---|
| 1. | ಬೆಂಗಳೂರು (ನಗರ) | 3.729 | 7.200 | 3.159 | 14.088 |

| | | | | | |
|---|---|---|---|---|---|
| 2. | ಬೆಂಗಳೂರು (ಗ್ರಾ) | 6.238 | 10.200 | 8.418 | 33.856 |
| 3. | ಬೆಳಗಾವಿ | 6.029 | 24.000 | 10.519 | 40.548 |
| 4. | ಬಳ್ಳಾರಿ | 9.040 | 19.200 | 8.418 | 37.458 |
| 5. | ಬೀದರ್ | 5.500 | 12.000 | 5.259 | 22.759 |
| 6. | ಬಿಜಾಪುರ | 12.000 | 26.400 | 11.561 | 49.961 |
| 7. | ಚಿಕ್ಕಮಗಳೂರು | 6.000 | 22.800 | 7.360 | 36.160 |
| 8. | ಚಿತ್ರದುರ್ಗ | 25.190 | 26.600 | 9.461 | 61.251 |
| 9. | ದ. ಕನ್ನಡ | 6.540 | 19.200 | 8.402 | 34.142 |
| 10. | ಧಾರವಾಡ | 16.932 | 40.800 | 17.879 | 75.611 |
| 11. | ಗುಲ್ಬರ್ಗ | 12.000 | 24.000 | 10.519 | 46.519 |
| 12. | ಹಾಸನ | 7.478 | 22.200 | 8.402 | 38.080 |
| 13. | ಕೊಡಗು | , 3.614 | 9.200 | 3.159 | 15.973 |
| 14. | ಕೋಲಾರ | 20.120 | 31.400 | 11.561 | 63.081 |
| 15. | ಮಂಡ್ಯ | 5.279 | 19.800 | 7.360 | 32.439 |
| 16. | ಮೈಸೂರು | - | 26.400 | 11.561 | 37.961 |
| 17. | ರಾಯಚೂರು | 15.780 | 31.000 | 9.461 | 56.241 |
| 18. | ಶಿವಮೊಗ್ಗ | 16.310 | 30.600 | 9.461 | 56.371 |
| 19. | ತುಮಕೂರು | 10.000 | 27.000 | 10.519 | 47.519 |
| 20. | ಉ.ಕನ್ನಡ | 8.206 | 26.400 | 11.561 | 46.167 |
| | ಒಟ್ಟು | 196.788 | 465.400 | 184.000 | 846.188 |

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೇ, ಜಿಲ್ಲಾವಾರು ಮಹಿಳೆಯರ ಯೊದಿ ಇದರಲ್ಲಿಲ್ಲ. ಸಿಬ್ಬಂದಿ ವರ್ಗಕ್ಕೆ ಎಷ್ಟು ಖರ್ಚು ಮಾಡಲಾಗಿದೆ, ವಾಹನಗಳಿಗೆ ಎಷ್ಟು ಖರ್ಚು ಮಾಡಲಾಗಿದೆ? ಕಳೆದ ಮೂರು ವರ್ಷಗಳಲ್ಲಿ 8 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆಂದು ಹೇಳಿದ್ದೀರಿ. ಈ ಯೋಜನೆಯ ವಿವರವಾದಂತಹ ಏನು ಕಾರ್ಯಕ್ರಮ ಇದೆ ಅದರ ಬಗ್ಗೆ ತಾವು ಹೇಳಿಕೆ ನೀಡಬೇಕು. ಆಮೇಲೆ ಸುಮಾರು 453 ಮಹಿಳಾ ಅಭ್ಯರ್ಥಿಗಳಿಗೆ ಟೈಪಿಂಗ್ ಕೊಟ್ಟು, 78 ಅಭ್ಯರ್ಥಿಗಳಿಗೆ ಟೈಪಿಂಗ್ ಟ್ರೈನಿಂಗ್ ಕೊಟ್ಟು ಸುಮಾರು 8 ಕೋಟಿ ರೂಪಾಯಿ ಖರ್ಚು ಮಾಡುವ ಉದ್ದೇಶ ಏನು ಎಂಬುದನ್ನು ತಿಳಿಸಬೇಕೆಂದು ತಮ್ಮ ಮೂಲಕ ಮಾನ್ಯ ಮಂತ್ರಿಯವರನ್ನು ಕೇಳಬಯಸುತ್ತೇನೆ.

ಶ್ರೀ ಎಂ. ವೈ. ಘೋರ್ಪಡೆ: ಮಾನ್ಯ ಅಧ್ಯಕ್ಷರೇ, ಇದು ಟೈಸಂ ಕಾರ್ಯಕ್ರಮಕ್ಕೆ ಸಂಬಂಧಪಟ್ಟಂತಹ ಪ್ರಶ್ನೆಯಾಗಿದೆ. ಈಗ ಮಾನ್ಯ ಸದಸ್ಯರೇ ಹೇಳಿದಂತೆ 8 ಕೋಟಿ 46 ಲಕ್ಷ ರೂಪಾಯಿ ಈ ಮೂರು ವರ್ಷದಲ್ಲಿ ಖರ್ಚಾಗಿದೆ ಮತ್ತು ಮೂರು ವರ್ಷದಲ್ಲಿ 453 ವಿದ್ಯಾರ್ಥಿಗಳಿಗೆ ಹೊಲಿಗೆ ತರಬೇತಿಯಲ್ಲಿ ಟ್ರೈನಿಂಗ್ ಕೊಟ್ಟಿದ್ದಾರೆ. 1992-93ರಲ್ಲಿ 177 ಜನ ವಿದ್ಯಾರ್ಥಿಗಳನ್ನು ಟ್ರೈನಿಂಗ್‌ಗೋಸ್ಕರ ಆರು ತಾಲ್ಲೂಕ್‌ಗಳಲ್ಲಿ ಗುರ್ತಿಸಿ ಜಿಲ್ಲಾಮಟ್ಟಕ್ಕೆ ಆ ಪಟ್ಟಿ ಬಂದಾಗ ಜಿಲ್ಲಾ ಮಟ್ಟದಲ್ಲಿ ಈಗಾಗಲೇ ಇಷ್ಟು ಜನರಿಗೆ ಟ್ರೈನಿಂಗ್ ಕೊಟ್ಟಿದ್ದೇವೆ. ಪುನಃ ಈ ವರ್ಷ ಇದೇ ಟ್ರೈನಿಂಗ್ ಕೊಡುವ ಅವಶ್ಯಕತೆ ಇಲ್ಲ ಎನ್ನುವ ತೀರ್ಮಾನಕ್ಕೆ ಅವರು ಬಂದಾಗಿದೆ. ಆ ಕಾರಣ ಬೆಳಗಾಂ ಜಿಲ್ಲಾಪರಿಷತ್ತಿನವರು ಟ್ರೈನಿಂಗ್ ಬಗ್ಗೆ ಈ ರೀತಿ ತೀರ್ಮಾನ ಏತಕ್ಕೆ ತೆಗೆದುಕೊಂಡರು ಎಂದು ನಾವು ಪರಿಶೀಲಿಸುತ್ತಿದ್ದೇವೆ. ಅದಕ್ಕೋಸ್ಕರ

ಅಕ್ಕಮಹಾದೇವಿ ಸೊಸೈಟಿ ಏನಿದೆ ಅವರಿಗೂ ಕೂಡ ಕೊಟ್ಟಿಲ್ಲ. ಯಾರಿಗೂ ಕೊಟ್ಟಿಲ್ಲ. ನನ್ನ ದೃಷ್ಟಿಯಲ್ಲಿ ಈ ಟೈಲರಿಂಗ್ ಪ್ರೋಗ್ರಾಂ ನಿಲ್ಲಬಾರದು? ಬೆಳಗಾಂ ಜಿಲ್ಲಾಪರಿಷತ್ತಿನವರು ಆ ರೀತಿ ಏಕೆ ಮಾಡಿದ್ದಾರೆ ಅದನ್ನು ತಿಳಿದುಕೊಂಡು ಟೈಲರಿಂಗ್ ಪ್ರೋಗ್ರಾಂನ್ನು ಮುಂದುವರಿಸಲಿಕ್ಕೆ ನಾವು ಆದೇಶವನ್ನು ಕೊಡುತ್ತೇವೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೇ, 1990-91ರಲ್ಲಿ 1.96 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೀರಿ. 1991-92ರಲ್ಲಿ 4.65 ಕೋಟಿ ರೂಪಾಯಿಯನ್ನು ಖರ್ಚು ಮಾಡಿದ್ದೀರಿ. ಈ ವರ್ಷ 1.84 ಕೋಟಿ ರೂಪಾಯಿಯನ್ನು ಖರ್ಚು ಮಾಡಿದ್ದೀರಿ. 1991-92ರಲ್ಲಿ 4.65 ಕೋಟಿ ರೂಪಾಯಿಯನ್ನು ತಾವೇನು ಖರ್ಚು ಮಾಡಿದ್ದೀರಿ ಇದರಲ್ಲಿ ಕೇಂದ್ರ ಸರ್ಕಾರದ್ದು ಎಷ್ಟು ಬರುತ್ತದೆ. ರಾಜ್ಯ ಸರ್ಕಾರದಿಂದ ಎಷ್ಟು ಬರುತ್ತದೆ. ಈ ಯೋಜನೆ ಜಿಲ್ಲಾಪರಿಷತ್ತಿನ ವ್ಯಾಪ್ತಿಗೆ ಕೊಡುವುದರಿಂದ ಪ್ರಯೋಜನ ವಾಗುವುದಿಲ್ಲ. ಇದನ್ನು ನೇರವಾಗಿ ಸಮಾಜ ಕಲ್ಯಾಣ ಇಲಾಖೆಗೆ ಅಥವಾ ಬೇರೆ ಯಾವುದಾದರೂ ಡಿಪಾರ್ಟ್‌ಮೆಂಟಿಗೆ ವಹಿಸಿಕೊಡಬೇಕೆಂದು ತಮ್ಮ ಮೂಲಕ ಕೇಳಿ ಕೊಳ್ಳುತ್ತೇನೆ.

ಶ್ರೀ ಎಂ. ವೈ. ಘೋರ್ಪಡೆ : ಮಾನ್ಯ ಅಧ್ಯಕ್ಷರೇ, ಈ ಟೈಸಂ ಕಾರ್ಯಕ್ರಮ ಇದು ದೇಶ ವ್ಯಾಪ್ತಿಯಾಗಿರತಕ್ಕ ಕಾರ್ಯಕ್ರಮ. ಕೇಂದ್ರ ಸರ್ಕಾರಕ್ಕೂ ಇದರಲ್ಲಿ ಆಸಕ್ತಿ ಇದೆ. ರಾಜ್ಯಸರ್ಕಾರಕ್ಕೂ ಆಸಕ್ತಿ ಇದೆ. ಜಿಲ್ಲಾ ಮಟ್ಟದಲ್ಲಿ ಇಂತಹ ಎಲ್ಲಾ ಕಾರ್ಯಕ್ರಮಗಳ ಅನುಷ್ಠಾನ ಏನಿದೆ ಅದರ ಸೂಪರ್‌ವಿಜನ್‌ನಲ್ಲಿ ನಡೆಯಬೇಕೆಂಬುದೇ ನಮ್ಮ ಸಿದ್ಧಾಂತವಾಗಿದೆ. ಪಂಚಾಯತಿ ರಾಜ್ಯ ಆಡಿಯಲ್ಲಿ ಎಲ್ಲಾ ಅಭಿವೃದ್ಧಿ ಕಾರ್ಯಕ್ರಮಗಳು ಜಿಲ್ಲಾಮಟ್ಟದಲ್ಲಿ ಆಗಲೀ ಅಥವಾ ತಾಲ್ಲೂಕು ಮಟ್ಟದಲ್ಲಾಗಲಿ ನಡೆಯಬೇಕು. ಅವರು ಕೊಡುವ ಉದ್ದೇಶ ಅವರು ಬಜೆಟ್‌ನಲ್ಲಿ ಸೇರಿಸುವ ಉದ್ದೇಶ ಏನೆಂದರೆ ಅವರು ಅದರ ಕಡೆ ಲಕ್ಷ್ಯವನ್ನು ಕೊಟ್ಟು ಅದು ಸರಿಯಾಗಿ ಅನುಷ್ಠಾನಕ್ಕೆ ಬರುತ್ತಿದೆಯೋ ಇಲ್ಲವೋ ನೋಡಲಿ ಎನ್ನುವುದು. ಆ ಕಾರಣ ನಾವು ಅದನ್ನು ರಾಜ್ಯಸರ್ಕಾರಕ್ಕೆ ವಾಪಸ್ಸು ತೆಗೆದುಕೊಳ್ಳುವ ವಿಚಾರದಲ್ಲಿ ನನ್ನ ಸಹಮತಿ ಇಲ್ಲ. ಸರಿಯಾದಂತಹ ಕ್ರಮ ಅಲ್ಲ ಎಂದು ನನ್ನ ಸಹಮತಿ ಇಲ್ಲ. ಅವರು ಅಲ್ಲಿ ಏನಾದರೂ ಮಾಡದೇ ಇದ್ದರೆ ನಾವು ಅವರನ್ನು ಕೇಳಬಹುದು. ಮಾನ್ಯ ಸದಸ್ಯರು ಟೈಲರಿಂಗ್ ಪ್ರೋಗ್ರಾಂ ಅನ್ನು ಏತಕ್ಕೆ ನಿಲ್ಲಿಸಿದರು ಅಕ್ಕಮಹಾದೇವಿ ಸೊಸೈಟಿಗೆ ಏತಕ್ಕೆ ಕೊಡಲಿಲ್ಲ ಅಂತ ಕೇಳಿದರು. ಇದನ್ನು ನಾವು ಕೇಳಬಹುದು. ಆದರೆ ಕಾರ್ಯಕ್ರಮವನ್ನು ಜಿಲ್ಲಾಮಟ್ಟಕ್ಕೆ ಕೊಟ್ಟಿದ್ದೆ ತಪ್ಪು ಎಂದು ಹೇಳುವುದಾದರೆ ನಾನು ಅದನ್ನು ಒಪ್ಪಲಿಕ್ಕೆ ಸಾಧ್ಯವಿಲ್ಲ.

ಶ್ರೀ ಜೆ. ಸಿ. ಮಾಧುಸ್ವಾಮಿ : ಟೈಸಂ ಮತ್ತು ಸ್ವಯಂ ಉದ್ಯೋಗ ಸ್ಕೀಮ್‌ನಲ್ಲಿ ಏನು ತಾಲ್ಲೂಕು ಲೆವೆಲ್ ಸೆಲೆಕ್ಷನ್ ಕಮಿಟಿಯನ್ನು ಮಾಡಿದ್ದೀರಿ. ಅದರಲ್ಲಿ ಏನಾದರೂ ಶಾಸಕರನ್ನು ಅಥವಾ ಅಧಿಕಾರೇತರ ಸದಸ್ಯರನ್ನು ಹಾಕುವುದಕ್ಕೆ ಆಗುತ್ತದೆಯೇ? ಎರಡನೆಯದು, ಟೈಲರಿಂಗ್ ಕೋರ್ಸಿಗೆ ಟೀಚ್ ಮಾಡುವವರು ಏನು ಇರುತ್ತಾರೆ ಪರ್ಮನೆಂಟ್ ಆಗಿ ಒಬ್ಬೊಬ್ಬರು ಇಬ್ಬಿಬ್ಬರೆ ಇರುತ್ತಾರೆ, ಯಾವುದೇ ಊರಿನಲ್ಲಿ ಟೈಸಂ ಸ್ಕೀಂ ತೆಗೆದುಕೊಳ್ಳಿ, ಅವರೇ ಅಲ್ಲಿ ಹೇಳಿಕೊಡುವುದಕ್ಕೆ ಹೋಗುತ್ತಾರೆ. ಅದೊಂದು ಪರ್ಮನೆಂಟ್ ಉದ್ಯೋಗ ವಾಗಿದೆ. ಅದನ್ನು ಏನಾದರೂ ತಪ್ಪಿಸುವುದಕ್ಕಾಗುತ್ತದೆಯೇ ಎಂದು ಸೃಷ್ಟೀಕರಣವನ್ನು ಕೇಳುತ್ತೇನೆ. ಎಂ.ಎಲ್.ಎ ಅಥವಾ ಯಾರಾದರೂ ನಾನ್ ಆಫಿಶಿಯಲ್ಸ್‌ಅನ್ನು ಸೆಲೆಕ್ಷನ್ ಕಮಿಟಿ ಮೆಂಬರ್ ಮಾಡಲಿಕ್ಕೆ ಸಾಧ್ಯವೆ?

ಶ್ರೀ ಎಂ. ವೈ. ಘೋರ್ಪಡೆ : ಜಿಲ್ಲಾ ಮಟ್ಟದಲ್ಲಿ ಈ ಎಲ್ಲಾ ವಿಷಯಗಳ

ಇವ್ಯಾಲ್ಯುವೇಷನ್ ನಡೆಯುತ್ತಿರುವಾಗ ಚರ್ಚೆ ನಡೆಯುತ್ತಿರುವಾಗ ಎಂ.ಎಲ್.ಎ ಗಳು ಅಲ್ಲಿ ಭಾಗವಹಿಸಬೇಕು. ತಮ್ಮ ಅಭಿಪ್ರಾಯವನ್ನು ಕೊಡಬೇಕು. ಏನು ಬೇಕಾದರೂ ಮಾಹಿತಿ ಅಲ್ಲಿ ಸಿಗುತ್ತದೆ. ಅದನ್ನು ಮಾಡುವುದು ಸೂಕ್ತ ಎಂದು ನನಗೆ ಅನ್ನಿಸುತ್ತದೆ. ಎರಡನೆಯ ಪ್ರಶ್ನೆ ಏನು.

ಶ್ರೀ ಜೆ. ಸಿ. ಮಾಧುಸ್ವಾಮಿ : ಕಲಿಸುವವರು ಇರುತ್ತಾರೆ.

ಶ್ರೀ ಎಂ. ವೈ. ಘೋರ್ಪಡೆ : ಎಂ.ಎಲ್.ಎ ಗಳಿಗೆ ಫಲಾನುಭವಿಗಳನ್ನು ಆರಿಸುವಂತಹ ಅಧಿಕಾರವನ್ನು ಕೊಡಲಿಕ್ಕೆ ಆಗುವುದಿಲ್ಲ. ಈಗ ಹಳ್ಳಿಯ ಮಟ್ಟದಲ್ಲಿ ಐ.ಆರ್.ಡಿ.ಪಿ ಫಲಾನುಭವಿಗಳು ಗ್ರಾಮಸಭೆಯಲ್ಲಿ ತೀರ್ಮಾನವಾಗಬೇಕೆಂದು ಇದೆ. ಹೀಗಿರುವಾಗ ನಾವು....

ಶ್ರೀ ಜೆ. ಸಿ. ಮಾಧುಸ್ವಾಮಿ : ಈ ದೇಶ ಹಾಗಿಲ್ಲ. ಟ್ರೈಸಂ ಹಾಗಲ್ಲ. ಐ.ಆರ್.ಡಿ.ಪಿ ಬೇರೆ ಟ್ರೈಸಂ ಬೇರೆ.

ಶ್ರೀ ಎಂ. ವೈ. ಘೋರ್ಪಡೆ : ಅದರ ಪ್ರಿನ್ಸಿಪಲ್ ಹೇಳುತ್ತೇನೆ. ಯಾವುದೇ ಕಾರ್ಯಕ್ರಮ ಆಗಲಿ, ಫಲಾನುಭವಿಗಳನ್ನು ಕ್ರಮಬದ್ಧವಾಗಿ ಆರಿಸದೆ ಹೋದರೆ ಜಿಲ್ಲಾಪರಿಷತ್ತಿನಲ್ಲಿ ನೀವು ಕೇಳಲಿಕ್ಕೆ , ಅಧಿಕಾರ ಇದೆ. ಫಲಾನುಭವಿಗಳು ಸರಿಯಾಗಿಲ್ಲ ಎಂದು ಕೇಳಬಹುದು.

ಶ್ರೀ ಜೆ. ಸಿ. ಮಾಧುಸ್ವಾಮಿ : ಟ್ರೈಸಂ, ಸ್ವಯಂ ಉದ್ಯೋಗ ಇವೆರಡು ತಾಲ್ಲೂಕ್ ಲೆವಲ್‌ನಲ್ಲಿ ಸೆಲೆಕ್ಟ್ ಆಗುತ್ತಿರುವುದು. ಯಾರೋ ಅಧಿಕಾರಿಗಳು ಕುಳಿತುಕೊಂಡು ಮಾಡುತ್ತಿರುವುದು ಅದಕ್ಕೇನಾದರೂ ಅಧಿಕಾರೇತರ ಸದಸ್ಯರುಗಳನ್ನು ಹಾಕುತ್ತೀರೋ? ಶಾಸಕರನ್ನು ಹಾಕಲಿಕ್ಕೆ ಆಗುತ್ತದೆಯೇ?

ಶ್ರೀ ಎಂ. ವೈ. ಘೋರ್ಪಡೆ : ತಾಲ್ಲೂಕ್ ಮಟ್ಟದಲ್ಲಿ ಈಗ ಸದ್ಯಕ್ಕೆ ಇರುವ ವ್ಯವಸ್ಥೆಯ ಪ್ರಕಾರ ಎಂ.ಎಲ್.ಎ.ಗಳು ಛೇರ್ಮನ್ ಆಗಿದ್ದಾರೆ. ಪಂಚಾಯತ್ ಸಮಿತಿಯಲ್ಲಿ ಇಲ್ಲಿಯವರೆ ಇದ್ದರು. ತಾಲ್ಲೂಕ್ ಪಂಚಾಯತ್ ಸಮಿತಿಯಲ್ಲಿ ಅವರೆ ಇದ್ದರು. ಈಗ ನಾವು ಹೊಸ ವ್ಯವಸ್ಥೆಯನ್ನು ತಂದರೂ ಕೂಡ ಎಂ.ಎಲ್.ಎಗಳಿಗೆ ತಾಲ್ಲೂಕ್ ಮಟ್ಟದಲ್ಲಿ ಯಾವ ಸ್ಥಾನ ಇರಬೇಕೋ ಅದನ್ನು ಕೊಟ್ಟೇ ಕೊಡುತ್ತೇವೆ. ತಾಲ್ಲೂಕು ಮಟ್ಟದ ವಿಚಾರವಾಗಿ ನಾನು ಒಂದು ಮಾತನ್ನು ಹೇಳುತ್ತೇನೆ. ಇದನ್ನೆಲ್ಲಾ ಆರಿಸುವಂಥ ಅಧಿಕಾರವನ್ನು ಒಬ್ಬರಿಗೆ ಕೊಟ್ಟರೆ ಅದು ಸರಿ ಹೊಗುತ್ತದೆಂಬ ವಾದವನ್ನು ನಾನು ನಂಬುವುದಿಲ್ಲ. ಒಂದು ಮೂವ್‌ಮೆಂಟ್ ಏನಿದೆ, ಅದಕ್ಕೋಸ್ಕರ ಎಂ.ಎಲ್.ಎ. ಇದ್ದಾರೆ, ಜನರಿಂದ ಆರಿಸಲ್ಪಟ್ಟ ಪ್ರತಿನಿಧಿಗಳು ಏನಿದ್ದಾರೆ ಸಿಬ್ಬಂದಿ ಏನು ಇದ್ದಾರೆ, ಇವರುಗಳೆಲ್ಲರೂ ಒಂದಾಗಿ ಕಲೆತು ಕಾರ್ಯಕ್ರಮ ಸರಿಯಾಗಿ ಅನುಷ್ಠಾನಗೊಳ್ಳುತ್ತಿದೆಯೆ? ಇಲ್ಲವೆ? ಎಂದು ನೋಡಬೇಕಾದಂಥ ಒಂದು ಕ್ರಮ. ಅದರ ಬಗ್ಗೆ ಗಮನ ಕೊಡಿ. ಎಂದು ಹೇಳುತ್ತಿದ್ದೇನೆ. ಅದನ್ನು ಬಿಟ್ಟು ಅವರ ಕಡೆಯಿಂದ ಪಾಪಸ್ಸು ತೆಗೆದು ಮಂತ್ರಿಗಳಿಗಾಗಲಿ, ಎಂ.ಎಲ್.ಎ.ಗಳಿಗಾಗಲಿ ಆರಿಸಿದ ತಕ್ಷಣ ಅದು ಸರಿಹೋಗುತ್ತದೆಂಬುದನ್ನು ನಾನು ನಂಬುವುದಿಲ್ಲ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ , ಬೆಳಗಾವಿ ಜಿಲ್ಲೆಯಲ್ಲಿ ಬಹಳಷ್ಟು ಮಹಿಳೆಯರು ದೇವದಾಸಿ ಪದ್ಧತಿಯಲ್ಲಿರುವುದರಿಂದ ಟ್ರೈಸಂ ಯೋಜನೆಯಡಿ

ಯಲ್ಲಿ ಎಷ್ಟು ದೇವದಾಸಿ ಫಲಾನುಭವಿಗಳನ್ನು ಆರಿಸಿದ್ದೀರಿ? ಈ ಟ್ರೈಸಂ ಯೋಜನೆ ಯಾವ ಇಲಾಖೆಯಿಂದ ನೇರವಾಗಿ ನಡೆಯುತ್ತದೆ? ಈ ಯೋಜನೆಗೆ ಕೇಂದ್ರ ಸರ್ಕಾರದಿಂದ ಎಷ್ಟು ಹಣ ಬಂದಿದೆ ? ರಾಜ್ಯ ಸರ್ಕಾರ ಎಷ್ಟು ಹಣ ಒದಗಿಸಿದೆ? ಮತ್ತು ದೇವದಾಸಿಯರಿಗಾಗಿ ತಾವು ಯಾವ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಿ?

ಶ್ರೀ ಎಂ. ವೈ. ಘೋರ್ಪಡೆ : ಇದರ ಬಗ್ಗೆ ಮಾನ್ಯ ಸದಸ್ಯರು ಪ್ರತ್ಯೇಕ ಪ್ರಶ್ನೆ ಕೇಳಿದರೆ ಉತ್ತರ ಒದಗಿಸಿಕೊಡಲಾಗುವುದು.

ವಿಷಯ : ಬೀದರ್ ಜಿಲ್ಲೆಯಲ್ಲಿ ಐ.ಆರ್.ಡಿ.ಪಿ ಯೋಜನೆ.

1241

ಶ್ರೀ ನಾರಾಯಣರಾವ್ ಮನಹಳ್ಳಿ (ಬೀದರ್) : ಮಾನ್ಯ ಗ್ರಾಮಾಣಾಭವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಐ.ಆರ್.ಡಿ.ಪಿ ಯೋಜನೆ ಅನ್ವಯ ಬೀದರ್ ಜಿಲ್ಲೆಯಲ್ಲಿ 1990-91, 1991-92 ಮತ್ತು 1992-93ನೇ ಸಾಲಿನ ಒಟ್ಟು ವೆಚ್ಚ?
ಆ) ತಾಲ್ಲೂಕುವಾರು ಫಲಾನುಭವಿಗಳ ಸಂಖ್ಯೆಯನ್ನು ಒದಗಿಸುವುದು;
ಇ) ಬಡತನ ರೇಖೆ ಮೀರಿ ಆರ್ಥಿಕ ಮಟ್ಟ ಸುಧಾರಣೆಯಾಗಿದೆಯೆ?
ಈ) ಹಣ ದುರುಪಯೋಗವನ್ನು ತಪ್ಪಿಸಲು ಉಸ್ತುವಾರಿ ಏಜನ್ಸಿ ಯಾವುದಾದರೂ ಇದೆಯೆ?

ಶ್ರೀ ಎಂ. ವೈ. ಘೋರ್ಪಡೆ ( ಗ್ರಾಮಾಣಾಭವೃದ್ಧಿ ಮತ್ತು ಪಂ.ರಾಜ್ಯ ಸಚಿವರು)

ಅ) ಸಾಲುವಾರು ವೆಚ್ಚದ ವಿವರ ಈ ಕೆಳಕಂಡಂತಿವೆ ;
1990-91 ರೂ. 96.987 ಲಕ್ಷ ರೂ.
1991-92 ರೂ. 92.990 ಲಕ್ಷ ರೂ.
1992-93 ರೂ. 47.431 ಲಕ್ಷ ರೂ.
(31-1-93ರಲ್ಲಿದ್ದಂತೆ)

ಆ) ತಾಲ್ಲೂಕುವಾರು ಫಲಾನುಭವಿಗಳ ವಿವರ ಕೆಳಕಂಡಂತಿದೆ.

| | | 1990-91 | | 1991-92 | | 1992-93 | |
|---|---|---|---|---|---|---|---|
| | | ಗುರಿ | ಸಾಧನೆ | ಗುರಿ | ಸಾಧನೆ | ಗುರಿ | ಸಾಧನೆ |
| 1) | ಔರದ್ | 680 | 563 | 644 | 691 | 536 | 364 |
| 2) | ಬಸವಕಲ್ಯಾಣ | 637 | 639 | 603 | 658 | 503 | 454 |
| 3) | ಬಾಲ್ಕಿ | 637 | 648 | 603 | 497 | 503 | 205 |
| 4) | ಬೀದರ್ | 637 | 701 | 603 | 701 | 503 | 337 |
| 5) | ಹುಮ್ನಾಬಾದ್ | 552 | 437 | 526 | 709 | 436 | 191 |
| | ಒಟ್ಟು | 3143 | 3038 | 2979 | 3256 | 2481 | 1552 |